ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ : www.ksrtc.in

**Karnataka State Road Transport Corporation**
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.in

ಕರಾಸ:ಕೇಕ:ಆಡಳತ:ಸೇನಿ:517: 52: 16-17 ದಿನಾಂಕ: 23-05-2016

# ಸುತ್ತೋಲೆ ಸಂಖ್ಯೆ: 1589

ವಿಷಯ: ಹುಚ್ಚು (ಆ್ಯಂಟಿ ರೇಬಿಸ್) ಪ್ರಾಣಿ ಕಡಿತಕ್ಕೆ ಒಳಪಟ್ಟ ನೌಕರರ ಪ್ರಕರಣಗಳಲ್ಲಿ ವಿಶೇಷ ಸಾಂದರ್ಭಿಕ ರಜೆಯನ್ನು ನಿಯತಗೊಳಸುವ ಕುರಿತು.

ಉಲ್ಲೇಖ: 1) ಸಂ: ಆಇ 2 ಸೇನಿಸೇ 2016. ದಿನಾಂಕ: 15-04-2016
2) ಸುತ್ತೋಲೆ ಸಂಖ್ಯೆ: 284, ದಿನಾಂಕ 27-05-1975

---

ಹುಚ್ಚು (ಆ್ಯಂಟಿ ರೇಬಿಸ್) ಪ್ರಾಣಿಯಿಂದ ಕಚ್ಚಿಸಿಕೊಂಡ ನೌಕರನು ಚಿಕಿತ್ಸೆ ಪಡೆಯಲು ವಿಶೇಷ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡುವ ಕುರಿತು ಉಲ್ಲೇಖ-2ರ ಸುತ್ತೋಲೆ ಸಂಖ್ಯೆ:284, ದಿನಾಂಕ:27-05-1975ರಲ್ಲಿ ಸ್ಪಷ್ಟ ನಿರ್ದೇಶನವಿರುತ್ತದೆ. ಮುಂದುವರೆದಂತೆ, ಉಲ್ಲೇಖ-1 ರಲ್ಲಿ ಹುಚ್ಚುಪ್ರಾಣಿ ಕಡಿದ ಚುಚ್ಚುಮದ್ದಿನ ಚಿಕಿತ್ಸಾ ಪದ್ಧತಿಯು ಬದಲಾವಣೆಗೊಂಡಿದ್ದು, ನಿರ್ದಿಷ್ಟ ಅಂತರಗಳಲ್ಲಿ ಒಟ್ಟು 0,3,7,28ನೇ ದಿವಸದ ಚುಚ್ಚುಮದ್ದು ನೀಡುವ ಪದ್ಧತಿಯನ್ನು ಅನುಸರಿಸಲಾಗುತ್ತಿರುವುದಾಗಿ ತಿಳಿಸಿ ಕರ್ನಾಟಕ ಸರ್ಕಾರವು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ಅನುಬಂಧ-ಬಿ ಯಲ್ಲಿನ ನಿಯಮ-5 ನ್ನು ಕೆಳಕಂಡಂತೆ ತಿದ್ದುಪಡಿ ಮಾಡಿ ಈ ಆದೇಶದ ದಿನಾಂಕದಿಂದ ಜಾರಿಗೆ ಬರುವಂತೆ ಆದೇಶಿಸಿರುತ್ತದೆ (ಪ್ರತಿ ಲಗತ್ತಿಸಲಾಗಿದೆ).

"(5): ಹುಚ್ಚುಪ್ರಾಣಿ ಕಡಿದ ಸರ್ಕಾರಿ ನೌಕರನಿಗೆ ಚುಚ್ಚುಮದ್ದು ಪಡೆಯಬಹುದಾದ ವಾಸ್ತವ ದಿನಗಳಿಗೆ ಮಾತ್ರ ಮತ್ತು ಹುಚ್ಚುಪ್ರಾಣಿ ಕಡಿತದ ಪರಿಣಾಮವಾಗಿ ನಿರಂತರ ಚಿಕಿತ್ಸೆಯ ಅಗತ್ಯತೆಯ ಬಗ್ಗೆ ವೈದ್ಯರು ದೃಡೀಕರಿಸಿ ನೀಡುವ ವೈದ್ಯಕೀಯ ಪ್ರಮಾಣ ಪತ್ರ ಆಧಾರದ ಮೇರೆಗೆ ಗರಿಷ್ಠ 14 ದಿನಗಳಿಗೆ ಸೀಮಿತಗೊಳಿಸಿ ಸಾಂದರ್ಭಿಕ ರಜೆಯನ್ನು ಕೊಡಬಹುದು. ಇಂಥ ರಜೆಯ ಹೊರತಾಗಿ ಇನ್ನೂ ಹೆಚ್ಚಿನ ರಜೆ ಬೇಕಾಗಿರುವಲ್ಲಿ ಅದನ್ನು ಗಳಿಕೆ ರಜೆ ಅಥವಾ ಹಕ್ಕಿನ ರಜೆ ಅಥವಾ ಅರ್ಧ ವೇತನ ರಜೆಯಾಗಿ ಪರಿಗಣಿಸಬೇಕು".

ಆದುದರಿಂದ, ಸದರಿ ಆದೇಶದಂತೆ ನಿಗಮದ ಅಧಿಕಾರಿ/ನೌಕರರಿಗೂ (ತರಬೇತಿಯಲ್ಲಿರುವವರನ್ನು ಒಳಗೊಂಡಂತೆ) ಸಹ ವಿಶೇಷ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡುವುದು. ಉಳಿದಂತೆ ಸಂಖ್ಯೆ: 284, ದಿನಾಂಕ: 27-05-1975ರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಈ ಸುತ್ತೋಲೆಯು ತಕ್ಷಣದಿಂದ ಜಾರಿಗೆ ಬರುತ್ತದೆ.

ಅಡಕ: ಮೇಲಿನಂತೆ.

(ರಾಜೇಂದರ್ ಕುಮಾರ ಕಟಾರಿಯಾ)
ವ್ಯವಸ್ಥಾಪಕ ನಿರ್ದೇಶಕರು

... 2

<u>ಪ್ರತಿ ಮಾಹಿತಿಗಾಗಿ;</u>

1. ಅಧ್ಯಕ್ಷರು/ಉಪಾಧ್ಯಕ್ಷರು, ಕರಾರಸಾ ನಿಗಮ ರವರ ಆಪ್ತ ಕಾರ್ಯದರ್ಶಿಯವರಿಗೆ.
2. ವ್ಯವಸ್ಥಾಪಕ ನಿರ್ದೇಶಕರು, ಬೆಂಮಸಾಸಂಸ್ಥೆ/ವಾಕರಸಾಸಂಸ್ಥೆ/ಈಕರಸಾಸಂಸ್ಥೆ ರವರಿಗೆ.
3. ನಿರ್ದೇಶಕರು(ಸಿ:ಪ)/ ನಿರ್ದೇಶಕರು(ಭ:ಜಾ), ಕರಾರಸಾ ನಿಗಮ, ರವರಿಗೆ.

<u>ಪ್ರತಿ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:</u>

4. ಎಲ್ಲಾ ಇಲಾಖಾ ಮುಖ್ಯಸ್ಥರುಗಳು, ಕರಾರಸಾ ನಿಗಮ ರವರುಗಳಿಗೆ.
5. ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು (ನೇಮಕ), ಕರಾರಸಾ ನಿಗಮ/ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಬೆಂಮಸಾ ಸಂಸ್ಥೆ/ವಾಕರಸಾ ಸಂಸ್ಥೆ/ಈಕರಸಾ ಸಂಸ್ಥೆ ರವರಿಗೆ.
6. ಉಪ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ.
7. ಮುಖ್ಯ ಭದ್ರತಾ ಮತ್ತು ಜಾಗ್ರತಾಧಿಕಾರಿಗಳು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಸುತ್ತೋಲೆಯನ್ನು ಕೇಂದ್ರ ಕಛೇರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸಿ, ಪ್ರದರ್ಶಿತಗೊಂಡ ಬಗ್ಗೆ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು (ಸಿಬ್ಬಂದಿ) ರವರಿಗೆ ವರದಿ ಸಲ್ಲಿಸುವುದು.
8. ಮುಖ್ಯ ಗಣಕ ವ್ಯವಸ್ಥಾಪಕರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಸುತ್ತೋಲೆಯನ್ನು ನಿಗಮದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
9. ಪ್ರಧಾನ ಕಛೇರಿ ಪತ್ರ ಕಡತ.